(56)

# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/88/2014-15 ದಿ:25-07-2016

ವಾದಿಗಳು ವಿರುದ್ದ ಪ್ರತಿವಾದಿಗಳು

1.ಅಮೀತ್.ಬಿ.ತಂದೆ ಲೇಟ್ ಬಿ.ಆರ್.ಚಂದ್ರಪ್ಪ
2.ಮಂಜುನಾಥ.ಬಿ. ತಂದೆ ಲೇಟ್ ಬಿ.ಆರ್.
-ಚಂದ್ರಪ್ಪ @ ಚಂದ್ರಗೌಡ. ಸದಾಶಿವನಗರ. ಸಿರುಗುಪ್ಪ.

ಈರಮ್ಮ ಗಂಡ ಲೇಟ್ ನಾಗನಗೌಡ
ಬಲಕುಂದಿ ಗ್ರಾಮ. ಸಿರುಗುಪ್ಪ(ತಾ)

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಬಲಕುಂದಿ | 65/ಇ | 0-91 | ಖುಷ್ಕಿ |
| | | 65/ಎಫ್ | 0-34 | ಖುಷ್ಕಿ |
| | | 154/ಸಿ | 4-20 | ಖುಷ್ಕಿ |
| | | 158 | 0-81 | ಖುಷ್ಕಿ |
| | | 179/ಬಿ | 8-00 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಬಲಕುಂದಿ ಗ್ರಾಮದ ಸ,ನಂ. 65/ಇ ವಿ:0-91, 65/ಎಫ್, ವಿ:0-34, 154/ಸಿ, ವಿ:4-20, 158, ವಿ:0-81, 179/ಬಿ, ವಿ:8-00 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ಚಂದ್ರಗೌಡ ತಂದೆ ಲೇಟ್ ಬಸವನಗೌಡ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿ:15-05-2001 ರಂದು ಇವರ ಪತ್ನಿ ಭಾಗ್ಯಮ್ಮ ಇವರು ದಿ:10-12-2003 ರಂದು ಮರಣ ಹೊಂದಿದ್ದು, ಮೃತರ ವಾರಸು ಮಕ್ಕಳಾದ **1.ಅಮೀತ್.ಬಿ.ತಂದೆ ಲೇಟ್ ಬಿ.ಆರ್.ಚಂದ್ರಪ್ಪ @ ಚಂದ್ರಗೌಡ 2.ಮಂಜುನಾಥ.ಬಿ. ತಂದೆ ಲೇಟ್ ಬಿ.ಆರ್.ಚಂದ್ರಪ್ಪ @ ಚಂದ್ರಗೌಡ** ಇವರು ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆ ಮಾಡಲು ಕೋರಿ ಸಲ್ಲಿಸಿದ ಅರ್ಜಿ ಮೇರೆಗೆ ಅರ್ಜಿದಾರರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಕರೂರು ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಬಲಕುಂದಿ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ಈರಮ್ಮ ಗಂಡ ಲೇಟ್ ನಾಗನಗೌಡ** ಇವರು "ಪ್ರಸ್ತಾಪಿತ ಜಮೀನುಗಳು ಪಿತ್ರಾರ್ಜಿತ ಆಸ್ತಿಯಾಗಿದ್ದು, ಪ್ರಸ್ತುತ ತನ್ನ ಗಂಡನ ತಮ್ಮನಾದ ಚಂದ್ರಗೌಡ ಇವರ ಹೆಸರಿನಲ್ಲಿದ್ದು, ಸದ್ರಿ ಜಮೀನುಗಳಲ್ಲಿ ತಮಗೂ ಭಾಗವಿರುತ್ತದೆ, ಆದ್ದರಿಂದ ದಾವಾ ಜಮೀನುಗಳನ್ನು ಯಾರ ಹೆಸರಿಗೂ ಹಕ್ಕು ಬದಲಾವಣೆ ಮಾಡಬಾರದೆಂದು" ದಿನಾಂಕ:16-03-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಕರೂರು ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ,ಬ.ಸಂಖ್ಯೆ:52/2014-15 ದಿನಾಂಕ:30-03-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:24-07-2015 ರಿಂದ 20-06-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ಮತ್ತು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಪ್ರತಿವಾದಿ ಈರಮ್ಮ ಗಂಡ ಲೇಟ್ ನಾಗನಗೌಡ ಇವರು ಮೊದಲಿಗೆ ದಾವಾ ಜಮೀನುಗಳನ್ನು ಹಕ್ಕು ಬದಲಾವಣೆ ಮಾಡಬಾರದೆಂದು ತಿಳಿಸಿ, ನಂತರ ದಿ:11-04-2016 ರಂದು ತಾವು ರಾಜೀಯಾಗುವುದಾಗಿ ತಿಳಿಸಿದ ಮೇರೆಗೆ ಲಿಖಿತ ಹೇಳಿಕೆ ನೀಡಲು ಸೂಚಿಸಲಾಗಿ, ದಿನಾಂಕ:20-06-2016 ರಂದು ವಿಚಾರಣೆ ಸಮಯದಲ್ಲಿ "ತಾವುಗಳು ಗ್ರಾಮದ ಹಿರಿಯರ ಸಮಕ್ಷಮ ರಾಜೀಯಾಗಿದ್ದು, ದಾವಾ ಜಮೀನುಗಳನ್ನು ವಾದಿಗಳ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ತನ್ನ ಯಾವುದೇ ರೀತಿಯ ಆಕ್ಷೇಪಣೆಗಳು ಇರುವುದಿಲ್ಲವೆಂದು" ಅಫಿಡೆವಿಟ್ ಹಾಜರುಪಡಿಸಿರುತ್ತಾರೆ.

ಆದ್ದರಿಂದ, ಸಿರುಗುಪ್ಪ ತಾಲೂಕು ಬಲಕುಂದಿ ಗ್ರಾಮದ ಸ,ನಂ. 65/ಇ ವಿ:0-91, 65/ಎಫ್, ವಿ:0-34, 154/ಸಿ, ವಿ:4-20, 158, ವಿ:0-81, 179/ಬಿ, ವಿ:8-00 ಎಕ್ರೆ ಜಮೀನಿಗೆ ಪೋತಿ ವಾರಸು ಮೇರೆಗೆ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/88/2014-15** **ದಿ:25-07-2016**

**ಆದೇಶ**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಬಲಕುಂದಿ ಗ್ರಾಮದ ಸ,ನಂ. 65/ಇ ವಿ:0-91, 65/ಎಫ್, ವಿ:0-34, 154/ಸಿ, ವಿ:4-20, 158, ವಿ:0-81, 179/ಬಿ, ವಿ:8-00 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ಚಂದ್ರಗೌಡ ತಂದೆ ಲೇಟ್ ಬಸವನಗೌಡ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿ:15-05-2001 ರಂದು ಇವರ ಪತ್ನಿ ಭಾಗ್ಯಮ್ಮ ಇವರು ದಿ:10-12-2003 ರಂದು ಮರಣ ಹೊಂದಿರುವುದರಿಂದ, ಮೃತರ ವಾರಸು ಮಕ್ಕಳಾದ **1.ಅಮೀತ್.ಬಿ.ತಂದೆ ಲೇಟ್ ಬಿ.ಆರ್.ಚಂದ್ರಪ್ಪ @ ಚಂದ್ರಗೌಡ 2.ಮಂಜುನಾಥ.ಬಿ. ತಂದೆ ಲೇಟ್ ಬಿ.ಆರ್.ಚಂದ್ರಪ್ಪ @ ಚಂದ್ರಗೌಡ** ಇವರ ಹೆಸರಿಗೆ ಪೋತಿ ಪಟ್ಟಾ ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25-07-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ.
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

Amith. B